ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,
ನ.ರಾ.ಪುರ.
<u>ಸಿ.ಸಿ. ನಂ ಃ**33/2025**</u>

| | | |
|---|---|---|
| ಸಾಕ್ಷಿದಾರರ ಹೆಸರು | ಃ ಸುರೇಶ | ಸಿ.ಡಬ್ಲೂ್ಯ - 09 |
| ತಂದೆಯ ಹೆಸರು | ಃ ಫಕೀರಪ್ಪ | ಪಿ.ಡಬ್ಲೂ್ಯ - 04 |
| ವಯಸ್ಸು | ಃ 39 ವರ್ಷ | |
| ಉದ್ಯೋಗ | ಃ ಮೀನು ಹಿಡಿಯುವ ಕೆಲಸ | |
| ವಾಸಸ್ಥಳ | ಃ ಎನ್ ಆರ್ ಪುರ | |

ದಿನಾಂಕಃ **17/02/2026** ರಂದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃಃ</u>

ಚಾಸಾ 8 ರವರ ಪರಿಚಯ ಇರುತ್ತದೆ. ದಿಃ 30/11/2022 ರಲ್ಲಿ ಎನ್ ಆರ್ ಪುರ ಪೊಲೀಸ್ ಠಾಣಾ ಆವರಣದಲ್ಲಿ ಅಪ್ಪಾಚಿ ಬೈಕನ್ನು ಅಪಘಾತದ ಹಿನ್ನಲೆಯಲ್ಲಿ ಹಾಜರುಪಡಿಸಿದ್ದು, ಅದನ್ನು ನನ್ನ ಮತ್ತು ಚಾಸಾ 8 ರವರ ಸಮಕ್ಷಮ 5.15-5.45 ಕ್ಕೆ ಪೊಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆ. ಆ ಕಾಲಕ್ಕೆ ಭಾವಚಿತ್ರವನ್ನು ತೆಗೆದಿರುತ್ತಾರೆ.

2. ಸಾಕ್ಷಿಯು ಅಮಾನತ್ತು ಮಹಜರಿನಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದು ಸದರಿ ಅಮಾನತ್ತು ಮಹಜರನ್ನು ಈಗಾಗಲೇ ನಿಪಿ 8 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 8(ಬಿ) ಎಂದು ಗುರುತಿಸಲಾಯ್ತು. ನಿಪಿ 8 ಅನ್ನು ಮಾಡುವ ಕಾಲಕ್ಕೆ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 9 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಮಾನ್ಯ ಎ ಪಿ ಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದಃ</u>

ದಿಃ 30/11/2022 ರಂದು ಈ ಪ್ರಕರಣದಲ್ಲಿ ಆರೋಪಿ 3 ರವರು ತಂದು ಹಾಜರುಪಡಿಸಿದ ಒಂದು ಬಿಳಿ ಬಣ್ಣದ ಟಿ ವಿ ಎಸ್ ಕಂಪನಿಯ ಅಪ್ಪಾಚಿ ಆರ್ ಟಿ ಆರ್ 180 ಬೈಕಾಗಿದ್ದು, ಅದರ ಬೈಕಿನ ಹಿಂದೆ -ಮುಂದೆ ಕೆಎ 14 ಇ ಎನ್ 1422 ಬೈಕಾಗಿದ್ದು ಅದರ ಇಂಜಿನ್ ನಂಃ 0 ಇ 6 ಜಿ ಜಿ 2122029 ಹಾಗೂ ಛಾಸಿಸ್ ನಂಃ ಎಂ ಡಿ 634 ಕೆ ಇ 64 ಜಿ 2 ಜಿ 54312 ಎಂದು ಇದ್ದು, ಸದರಿ ಬೈಕಿನ ಮಾಸ್ಕ್ ಹತ್ತಿರ ಎಡಭಾಗದಲ್ಲಿ ಸ್ವಲ್ಪ ತರಚಿದಂತೆ, ಎಡಭಾಗದ ಬಂಪರ್ ತರಚಿದಂತೆ ಹಾಗೂ ಎಡಭಾಗದ ಇಂಡಿಕೇಟರ್ ಗೆ ಗಮ್ ಟೇಪ್ ಹಾಕಿರುವುದು ಕಂಡುಬಂತು ಎಂದರೆ

ಸರಿಯಲ್ಲ. ಸದರಿ ಬೈಕನ್ನು ಸಂಜೆ 5.15 ರಿಂದ 5.45 ರ ಅವಧಿಯಲ್ಲಿ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ 9 ರಂತೆ ಭಾವಚಿತ್ರ ತೆಗೆದಿದ್ದರೂ ಸಹ ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 8 ರಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **2** ಮತ್ತು **3** ನೇ ಆರೋಪಿತರ ಪರ ಶ್ರೀ ಜಿ ಡಿ ವಕೀಲರಿಂದಃ

ಪೊಲೀಸರು ಬೈಕನ್ನು ಯಾವ ದಿನಾಂಕದಂದು ಮತ್ತು ಯಾವ ಕಾರಣಕ್ಕಾಗಿ ಠಾಣೆಯಲ್ಲಿ ತಂದು ನಿಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಆ ದಿನ ಪೊಲೀಸರು, ಇಬ್ಬರು ಹುಡುಗರು ಬೈಕಿನಿಂದ ಬಿದ್ದು ಅಪಘಾತವಾಗಿರುತ್ತದೆ ಎಂದು ಹೇಳಿರುತ್ತಾರೆ. ಪೊಲೀಸರು ಹೇಳಿದ ಮೇರೆಗೆ ನಾನು ನಿಪಿ 8 ಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ